

# ಬೇಲೂರಿನ ಮಿನಿ ನಯಾಗರ

65 ಅಡಿ ಅಗಲಕ್ಕೆ ಬಳುಕಿ ಬರುವ ಜಲರಾಶಿ ಸುಮಾರು 15 ಅಡಿಯಿಂದ ಧುಮ್ಮಿಕ್ಕುತ್ತದೆ.

ಚಿತ್ರ-ಲೇಖನ: **ಡಾ. ಶ್ರೀವತ್ಸ ಎಸ್. ವಟಿ**



ವಿಶ್ವಪ್ರಸಿದ್ಧ ಬೇಲೂರಿನ ಚೆನ್ನಕೇಶವ ದೇವಾಲಯ ನಿಮಗೆ ಗೊತ್ತು. ಆದರೆ, ಇಲ್ಲೊಂದು ಜಲಪಾತ ಇರುವುದು ಬಹಳಷ್ಟು ಜನರಿಗೆ ಗೊತ್ತಿಲ್ಲ.

ಬೇಲೂರಿನಲ್ಲಿ ಹೊಯ್ಸಳ ಕಾಲದಲ್ಲೇ 'ವಿಷ್ಣುಸಮುದ್ರ' ಎಂಬ ಕೆರೆ ನಿರ್ಮಿತವಾಗಿದೆಯಷ್ಟೆ; ಈ ಕೆರೆಗೆ 'ವೇದಾವತಿ' ಎಂಬ ಒಂದು ಹಳ್ಳವು ನೀರೊದಗಿಸುತ್ತದೆ. ಈ ಹಳ್ಳವು ಕೆರೆಯ ನಿರ್ಮಾಣಕ್ಕೆ ಲಕ್ಷಾಂತರ ವರ್ಷಗಳ ಹಿಂದೆಯೇ ತನ್ನ ದಾರಿಗಾಗಿ ಮಣ್ಣನ್ನು ಕೊರೆಯುವಾಗ ನೆಲದಾಳದ ಒಂದು ದೊಡ್ಡ ಬಂಡೆ ಅದಕ್ಕೆ ಅಡ್ಡವಾಗಿದ್ದು, ಹಳ್ಳದ ನೀರು ಅದರ ಮೇಲಿಂದ ಧುಮುಕುವಂತಾಗಿತ್ತು. ಆ ಹಳ್ಳಕ್ಕೆ ಅಡ್ಡವಾಗಿ ವಿಷ್ಣುಸಮುದ್ರ ಕೆರೆಯನ್ನು ಕಟ್ಟಿದ ನಂತರ ಆ ಕೆರೆ ತುಂಬಿದಾಗ ಮಾತ್ರ ಕೋಡಿಯ ನೀರು ಹೊರ ಹೊಮ್ಮುತ್ತದೆ. ಆಗ ಜಲಪ್ರವಾಹವು ಪುರಾತನ ಹಳ್ಳದ ಮಾರ್ಗದಲ್ಲೇ ಕ್ರಮಿಸುತ್ತಾ 15 ಅಡಿ ಎತ್ತರದ ವಿಶಾಲ ಬಂಡೆಯ ಮೇಲಿಂದ ಸುಮಾರು 65 ಅಡಿ ಅಗಲಕ್ಕೆ ಮೈಯರಳಿಸಿ ಧುಮ್ಮಿಕ್ಕಿ ಅಲ್ಲೊಂದು ರಮಣೀಯ ಜಲಪಾತವೇ ಮೈದಾಳುತ್ತದೆ.

ಜೋಗದ ಸಿರಿ, ನಯಾಗರದ ರಮಣೀಯತೆ, ಅಬ್ಬಿಯ ಒನಪು, ಬಲಮುರಿಯ ಬಳುಕುಗಳ ಜತೆಗೆ ಕೆಪ್ಪಜೋಗದ ಮೊರೆತವೂ ಸೇರಿ ಅವೆಲ್ಲದರ ಮಿನಿಯೇಚರಿನಂತೆ ಈ ಜಲಪಾತ ವೈಭವ! ಬೇಲೂರಿನ ಜನತೆಗೆ ಇದು ಮನರಂಜನೆಯ ಋತು.

ಚಲನಚಿತ್ರಗಳ ಹಾಡು, ಪ್ರೇಮಪ್ರಸಂಗ, ಸಾಹಸದೃಶ್ಯಗಳ ಚಿತ್ರೀಕರಣಕ್ಕೆ ಹೇಳಿ ಮಾಡಿಸಿದಂತಿರುವ ಈ ತಾಣವು ನೀರಿಲ್ಲದಾಗಲೂ ಸಾಹಸದೃಶ್ಯಗಳ ಚಿತ್ರೀಕರಣಕ್ಕೆ ರುದ್ರ ಗಂಭೀರತೆಯನ್ನು ಒದಗಿಸಬಲ್ಲುದು. ಜಲಪಾತದ ಎಲ್ಲ ಧಾರೆಗಳೂ ಒಗ್ಗೂಡಿ ಮಡುವೊಂದಕ್ಕೆ ಧುಮುಕಿ, ಸುಳಿಯಾಗಿ ಸುತ್ತುವ 'ಚಕ್ರತೀರ್ಥ'ವೇ ಅಲ್ಲಿ ಮೈದಾಳುತ್ತದೆ. ಇದೂ ಒಂದು ಆಕರ್ಷಕ ನೋಟ.

ಮಳೆಗಾಲದಲ್ಲಿ ಕೆರೆ ತುಂಬಿ, ಕೋಡಿ ಬಿದ್ದಾಗ ಮಾತ್ರವೇ ಈ ಜಲಪಾತಕ್ಕೆ ಜೀವದಾನ. ಬೇಲೂರಿನ ಯಗಚಿ ಜಲಾಶಯದಿಂದ ನದಿಗೆ ಬಿಡುವ ನೀರಿನಲ್ಲಿ ಸ್ವಲ್ಪ ಭಾಗವನ್ನು ಕೆರೆಯ ಮೂಲಕ ಬಿಡಲು ಸಾಧ್ಯವಾದಲ್ಲಿ ವರ್ಷದ ಎಲ್ಲ ದಿನಗಳಲ್ಲೂ ಈ ಜಲಪಾತದ ರಮ್ಯತೆಯು ಜೀವಂತವಾಗಿ ಉಳಿದು, ಇದೊಂದು ಆಕರ್ಷಕ ಪ್ರವಾಸಿ ಕೇಂದ್ರವೇ ಆದೀತು. ಬೇಲೂರಿನ ಪ್ರವಾಸೀ ಮೌಲ್ಯವೂ ಹೆಚ್ಚೀತು! ಈಗಂತೂ ಈ ದೃಶ್ಯವೈಭವದ ಪರಿಚಯವೇ ಪ್ರವಾಸಿಗಳಿಗೆ ಆಗುತ್ತಿಲ್ಲ ಎಂಬುದು ಖೇದದಾಯಕ.

ನೂರು ಮಾತು ಹೇಳಲಾರದ್ದನ್ನು ಚಿತ್ರವೊಂದು ಹೇಳುತ್ತದೆ ಎಂಬಂತೆ. ಈ ಜಲಪಾತದ ರಮ್ಯತೆಗೆ ಈ ಚಿತ್ರಗಳೇ ಸಾಕ್ಷಿ.